## ಮನೆ ಹೊಗೆಯಿಂದ ಹೃದ್ರೋಗ

ಮನೆಯಲ್ಲಿ ಉರಿಸುವ ಸೀಮೆ ಎಣ್ಣೆ ದೀಪ ಹೊರಸೂಸುವ ಹೊಗೆ, ಅಡುಗೆ ಕೋಣೆಯಲ್ಲಿ ಸೀಮೆಎಣ್ಣೆ ಅಥವಾ ಸೌದೆ ಬಳಕೆಯಿಂದ ಉಂಟಾಗುವ ಹೊಗೆ ಹಾಗೂ ಸೀಮೆಎಣ್ಣೆ, ಡಿಸೆಲ್, ಕಲ್ಲಿದ್ದಿಲನ್ನು ಗೃಹಕೃತ್ಯದ ಬೇರೆಬೇರೆ ಕಾರಣಕ್ಕೆ ಬಳಸುವಾಗ ಉಂಟಾಗುವ ಹೊಗೆ ಕೂಡ ಹೃದಯಾಘಾತಕ್ಕೆ ಕಾರಣವಾಗುತ್ತದೆ ಎಂದು ವಾಷಿಂಗ್ಟನ್ ಸಂಶೋಧಕರ ಅಧ್ಯಯನ ಹೇಳಿದೆ.

ನೈಸರ್ಗಿಕ ಇಂಧನ ಮೂಲ ಬಳಸಿದರೆ ಇಂತಹ ಅಪಾಯಗಳ ಸಾಧ್ಯತೆ ಕಡಿಮೆಯಾಗುತ್ತದೆ. ಆದರೂ ಕೆಲವರು ಉರುವಲು ಹಾಗೂ ದೀಪಕ್ಕೆ ಸೀಮೆಎಣ್ಣೆಯನ್ನೇ ಅವಲಂಬಿಸಿದ್ದಾರೆ. ಇನ್ನೂ ಕೆಲವರು ಡಿಸೆಲ್‌ನಿಂದ ಗೃಹಕೃತ್ಯದ ಯಂತ್ರಗಳನ್ನು ನಡೆಸುತ್ತಿದ್ದಾರೆ. ವಿಶ್ವಸಂಸ್ಥೆಯ ಅಂಕಿ ಅಂಶದ ಪ್ರಕಾರ ವಿಶ್ವದ ಜನಸಂಖ್ಯೆಯ ಅರ್ಧದಷ್ಟು ಮಂದಿ ಇನ್ನೂ ಬಡತನದ ರೇಖೆಗಿಂತ ಕೆಳಗಿದ್ದಾರೆ. ಅವರು ಸೀಮೆಎಣ್ಣೆ, ಇದ್ದಿಲು ರೂಪದ ಅಪಾಯಕಾರಿ ಇಂಧನವನ್ನು ಬಳಸುತ್ತಿದ್ದಾರೆ ಎನ್ನಲಾಗಿದೆ.

## ರಕ್ತಸಂಬಂಧಿ ವಿವಾಹಗಳಿಂದ ಅಪಾಯ

ಹತ್ತಿರದ ಸಂಬಂಧಗಳಲ್ಲಿ ವೈವಾಹಿಕ ಸಂಬಂಧ ಬೆಳೆಸುವುದರಿಂದ, ಅಂತಹ ದಂಪತಿಗಳಿಗೆ ಜನಿಸುವ ಮಕ್ಕಳಲ್ಲಿ ಆಟಿಸಂ ತೊಂದರೆ ಎದುರಾಗುವ ಸಾಧ್ಯತೆ ಹೆಚ್ಚಿದೆ ಎಂದು ಲಂಡನ್ ಸಂಶೋಧಕರು ಹೇಳಿದ್ದಾರೆ.

ಸಹೋದರ ಸಂಬಂಧಿಗಳು ಮದುವೆಯಾದ ಸಂದರ್ಭದಲ್ಲಿ ದಂಪತಿಯಲ್ಲಿ ಯಾರಿಗಾದರೂ ಒಬ್ಬರಿಗೆ ಮೂರ್ಛೆರೋಗ ಇದ್ದ ಪಕ್ಷದಲ್ಲಿ ಮಗುವಿಗೆ ಆಟಿಸಂ ಬರುವ ಸಾಧ್ಯತೆ ದಟ್ಟವಾಗಿದೆ ಎಂದು ಸಂಶೋಧಕರು ಪ್ರತಿಪಾದಿಸಿದ್ದಾರೆ.

ಭಾವನಾತ್ಮಕ ಕಾರಣ ಹಾಗೂ ಆಸ್ತಿಯ ಆಸೆಗೆ ಸಹೋದರ ಸಂಬಂಧಗಳಲ್ಲಿ ಮದುವೆಯಾಗುವುದು ಹೆಚ್ಚು. ಹೀಗಾಗುವುದರಿಂದ ಅವರ ಮಕ್ಕಳ ಬೌದ್ಧಿಕ ಸಾಮರ್ಥ್ಯ ಕ್ಷೀಣಿಸುತ್ತದೆ. ಪೋಷಕರಲ್ಲಿ ಮೂರ್ಛೆರೋಗ ಇದ್ದರೆ ಶೇ.63ರಷ್ಟು ಪ್ರಮಾಣದಲ್ಲಿ ಮಗುವಿಗೆ ಆಟಿಸಂ ಬರುವ ಸಾಧ್ಯತೆ ಇದೆ ಎಂದು ತಜ್ಞರು ಹೇಳಿದ್ದಾರೆ.

## ಸಮುದ್ರ ಮಥನ




### ಮಾಹಿತಿ ಸೂಪರ್!

'ಯುವಜನರ ಮೋಹ ಸೂಪರ್ ಬೈಕ್', ಜಯಸಿಂಹ ಆರ್. ಅವರ ಮುಖಪುಟ ಲೇಖನ (ಸುಧಾ, 16 ಜೂನ್) ದಲ್ಲಿ ಬೈಕ್‌ಗಳ ಬಗ್ಗೆ ನೀಡಿದ ಮಾಹಿತಿ ಸೂಪರ್. ಸೂಪರ್ ಬೈಕ್ ವಿಲಾಸಿ ಪ್ರಿಯರಿಗೆ ಹಾಗೂ ಹಣವಂತರಿಗೆ ಮಾತ್ರ ಎಟುಕುವಂಥದ್ದು. ಹೆಣ್ಣು ಮಕ್ಕಳೂ ಇಂಥ ಭಾರೀ ತೂಕದ ಬೈಕ್ ರೈಡ್ ಮಾಡ್ತಾರೆಂದು ಓದಿ ಹೆಮ್ಮೆ ಎನಿಸಿತು.

ಮಧುರ ಸುಬ್ರಹ್ಮಣ್ಯ ಬೆಂಗಳೂರು

### ದುಬಾರಿ

ಸೂಪರ್ ಬೈಕ್‌ಗಳು ಅದರಲ್ಲೂ ಅಷ್ಟೊಂದು ವೇಗವಾಗಿ ಹೋಗುವ ಬೈಕ್‌ಗಳ ಸುರಕ್ಷತೆ ಬಗ್ಗೆ ಮಾಹಿತಿಯಿಲ್ಲ. ಈ ಬೈಕ್‌ಗಳು ಮಧ್ಯಮವರ್ಗದವರಿಗೆ ತುಂಬಾ ದುಬಾರಿ ಎನಿಸುತ್ತವೆ.

ಎಂ.ಎಸ್.ಧರ್ಮೇಂದ್ರ, ದೊಡ್ಡಮಗ್ಗೆ

### ಮಿತಿ ಇರಲಿ

ಇತ್ತೀಚೆಗೆ ಯುವಕರಲ್ಲಿ ಒಂದು ರೀತಿಯ ಬೈಕ್ ಹುಚ್ಚೆದ್ದಿರುವುದು ಕಾಣುತ್ತೇವೆ. ಅವುಗಳನ್ನೇರಿ ಅವರು ಹೋಗುವ ವೇಗ, ಮಿತಿ ಮೀರಿದ ಶಬ್ದ, ರಸ್ತೆಯಲ್ಲಿ ಅವರು ಮಾಡುವ ವೀಲಿಂಗ್ ಸರ್ಕಸ್ ನೋಡುತ್ತಿದ್ದರೆ ಮೈ ಜುಮ್ ಎನಿಸುತ್ತದೆ. ಹೃದಯ ಢವಗುಟ್ಟುತ್ತದೆ. ಯಾವುದಕ್ಕೂ ಒಂದು ಮಿತಿ ಇದ್ದರೆ ಒಳಿತು.

ಮೇ.ಗೋ. ಸುಬ್ಬಣ್ಣ ಮೇಗರವಳ್ಳಿ

### ಸಕಾಲಿಕ ಬರಹ

ವಿಚಾರಲಹರಿಯಲ್ಲಿ 'ಕ್ಷಮಿಸಿರೆಂಬ ಮಾತು ಕಷ್ಟ' ಬರಹ (ತೋಷ) ಸಕಾಲಿಕ. ಸರ್ವಾಧಿಕಾರಿ ಧೋರಣೆಯುಳ್ಳ ಅಮೆರಿಕ ತಾನು ಮಾಡುತ್ತಿರುವುದೆಲ್ಲ ಸರಿ ಎಂದು ಸಮರ್ಥಿಸಿಕೊಳ್ಳುತ್ತಿರುವಾಗ ಕ್ಷಮೆ ಕೇಳಲು ಹೇಗೆ ಸಾಧ್ಯ? ತೃತೀಯ ರಂಗದ ರಾಷ್ಟ್ರಗಳು ಒಗ್ಗಟ್ಟಿನಿಂದ ಅಮೆರಿಕಕ್ಕೆ ಪಾಠ ಕಲಿಸಬೇಕು.

ಮಹಾವೀರ ಕಾಸರ ಶಿವಮೊಗ್ಗ, ಎಸ್. ಲಕ್ಷ್ಮೀನರಸಿಂಹ ಚಾಮರಾಜನಗರ, ಎಚ್.ಆನಂದಕುಮಾರ್ ಚಿತ್ರದುರ್ಗ

### ಸಾಮಯಿಕ ಎಚ್ಚರಿಕೆ

'ನಿಮ್ಮೊಡನೆ'ಯಲ್ಲಿ 'ಸರ್ಕಾರಿ ಶಾಲೆಗಳಿಗೆ ಬೀಗ' (ರಘುನಾಥ ಚ.ಹ.) ಸಾಮಯಿಕ ಎಚ್ಚರಿಕೆಯ ಅಗ್ರಬರಹ. ಇಂದಿನ ಈ ಪರಿಸ್ಥಿತಿಗೆ ಸರ್ಕಾರವೇ ಹೊಣೆ ಎಂಬುದನ್ನು ಲೇಖಕರು ಚೆನ್ನಾಗಿ ವಿವರಿಸಿದ್ದಾರೆ.

ಟಿ.ಎನ್. ಸರಸ್ವತಿ ತುರುವೇಕೆರೆ, ಡಾ.ಕೆ.ಕೆ. ಜಯಚಂದ್ರಗುಪ್ತ ಹಾಸನ, ಕೊಹಿಮ ಬಸರಕೋಡು

### ಕರಾವಳಿಯಲ್ಲಿ ಸಂಖ್ಯೆ ಹೆಚ್ಚು

ಕರಾವಳಿಯಲ್ಲಿ ಸರ್ಕಾರಿ ಶಾಲೆಗಳಲ್ಲಿ ಮಕ್ಕಳ ಸಂಖ್ಯೆ ಹೆಚ್ಚುತ್ತಿದೆ. ಕೋಟೇಶ್ವರದಲ್ಲಿ ಶಾಲೆ ಮಕ್ಕಳ ಸಂಖ್ಯೆ ಕೇಳಿದಾಗ ಕಳೆದ ವರ್ಷ 320 ಇದ್ದದ್ದು ಈ ವರ್ಷ 385 ಆಗಿದೆ.

ಕೋಟೇಶ್ವರ ಸೂರ್ಯನಾರಾಯಣರಾವ್ ಬೆಂಗಳೂರು

### ಉಪಯುಕ್ತ ಲೇಖನ

ಆರೋಗ್ಯ ಲೇಖನ 'ಪ್ರತಿರಕ್ಷಣಾ ಶಕ್ತಿವರ್ಧನೆ ಹೇಗೆ?' (ಸುಧಾ ಹೆಗಡೆ) ಉಪಯುಕ್ತವಾಗಿದೆ. ಔಷಧಗಳ ಮೇಲೆ ಹೆಚ್ಚು ಅವಲಂಬಿತವಾಗದೆ ಸ್ವತಃ ನಾವೇ ಹೇಗೆ ರೋಗ ನಿರೋಧಕ ಶಕ್ತಿ ಹೆಚ್ಚಿಸಿಕೊಳ್ಳ ಬಹುದು ಎಂಬುದನ್ನು ಲೇಖನ ಚೆನ್ನಾಗಿ ಮನದಟ್ಟು ಮಾಡಿದೆ.

ಎಂ.ಜಿ. ರಾಮಚಂದ್ರ ಮಂಡಗಳಲೆ, ಎಂ. ಮೃತ್ಯುಂಜಯಪ್ಪ ಚಿತ್ರದುರ್ಗ

### ಹೃದಯಸ್ಪರ್ಶಿ

ಸುಚೇತಾ ಗೌತಮ್ ಕಥೆ 'ಬೆಕ್ಕು' ಹೃದಯಸ್ಪರ್ಶಿಯಾಗಿದೆ.

ಎಸ್.ವಿಜಯಕುಮಾರಿ ಬೆಂಗಳೂರು

### ಪ್ರವಾಸ ಬರಹ

'ನೆದರ್ಲಂಡ್‌ನಲ್ಲೊಂದು ಪುಷ್ಪಕಾವ್ಯ' ಪ್ರವಾಸ ಲೇಖನ (ಚೈತ್ರ ಎಲ್.ಹೆಗಡೆ) ಓದಿ ಚಿತ್ರ ನೋಡಿ ಖುಷಿಯಾಯಿತು.

ಎಸ್. ಸುಂದರ್ ಬೆಂಗಳೂರು

### ಸಮಂಜಸ

'ಎಂಜಿನಿಯರಿಂಗ್ ನೌಕರಿ ಸಿಗಲ್ಲ; ಪದವಿಗೇನರ್ಥ? (ಮಂಜುನಾಥ ಉಲವತ್ತಿಶೆಟ್ಟರ್) ಲೇಖನ ಸಮಂಜಸವಾಗಿದೆ. ಉದ್ಯಮ ಮತ್ತು ಶಿಕ್ಷಣ ಸಂಸ್ಥೆಗಳು ಒಟ್ಟಿಗೆ ಕುಳಿತು ಯೋಜನೆ ರೂಪಿಸಲಿ.

ರಾಜಶೇಖರ ಹಾದಿಮನಿ ಧಾರವಾಡ, ಹೇಮಾ ಸುಬ್ರಹ್ಮಣ್ಯ ಹಾಲ್ಮುತ್ತೂರು

### ದಾಲ್ಚಿನ್ನಿ ಗಿಡ ಅಲ್ಲ

'ದಾಲ್ಚಿನ್ನಿ ಅಥವಾ ಚಕ್ಕೆ' (ನಾಗರತ್ನಾ ಗೋವಿಂದನ್ನವರ) ಲೇಖನದ ಮಾಹಿತಿ ಚೆನ್ನಾಗಿದೆ. ಆದರೆ ಅದರಲ್ಲಿ ಬಳಸಿದ ಒಂದು ಗಿಡದ ಚಿತ್ರ ದಾಲ್ಚಿನ್ನಿ ಗಿಡ ಅಲ್ಲ; ಅದು ಜರಿಗಿಡ.

ಜಾನಕಿ ಎನ್. ಆಚಾರ್ಯ ಉಡುಪಿ, ಎಸ್. ಓಂಕಾರಯ್ಯ ತವನಿಧಿ ದಾವಣಗೆರೆ

## ಮುದ್ದಣ ಕಾವ್ಯ ಪ್ರಶಸ್ತಿ

ಕಾಂತಾವರ ಕನ್ನಡ ಸಂಘವು 2016ರ ಸಾಲಿನ ಕಾವ್ಯ ಪ್ರಶಸ್ತಿಗಾಗಿ ಮುದ್ರಣಕ್ಕೆ ಸಿದ್ಧವಾಗಿರುವ ಕವನ ಸಂಗ್ರಹಗಳ ಹಸ್ತಪ್ರತಿಗಳನ್ನು ಆಹ್ವಾನಿಸಿದೆ. ಪ್ರಶಸ್ತಿಯು ತಲಾ ರೂಪಾಯಿ ಹತ್ತುಸಾವಿರ ನಗದು ಮತ್ತು ಪ್ರಶಸ್ತಿ ಪತ್ರವನ್ನು ಒಳಗೊಂಡಿದ್ದು, ಆಸಕ್ತರು 5 ರೂಪಾಯಿ ಅಂಚೆ ಚೀಟಿ ಹಚ್ಚಿದ ಸ್ವವಿಳಾಸ ಇರುವ ಕವರನ್ನು ಕಳುಹಿಸಿ ಸ್ಪರ್ಧೆಯ ವಿವರಗಳನ್ನು ಅಧ್ಯಕ್ಷರು, ಕಾಂತಾವರ ಕನ್ನಡ ಸಂಘ (ರಿ), ಅಂಚೆ: ಕಾಂತಾವರ 574129, ಉಡುಪಿ ಜಿಲ್ಲೆ ಇವರಿಂದ ಪಡೆಯಬಹುದು. ವಿವರಗಳನ್ನು ಪಡೆಯುವ ಕೊನೆಯ ದಿನಾಂಕ ಜುಲೈ 30. ಹಸ್ತಪ್ರತಿ ಸ್ವೀಕಾರದ ಕೊನೆಯ ಆಗಸ್ಟ್ 30. ಮಾಹಿತಿಗೆ: 9008978366, 8548933733